

بِسْمِ اللّٰهِ الرَّحْمٰنِ الرَّحِيْمِ

# ಜಲ್ಸಾ ಸಾಲಾನ ಹಾಲೆಂಡ್ – 2019

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಹಾಲೆಂಡಿನ ನನ್ಸ್‌ಪೀಟ್‌ನ ಜಲ್ಸಗಾಹ್ ನಿಂದ 27–09–2019 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔
أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔
اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔
اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅಲ್ಲಾಹನ ಅನುಗ್ರಹದಿಂದ ಇಂದು ಹಾಲೆಂಡಿನ ಜಲ್ಸಾ ಸಾಲಾನ ಪ್ರಾರಂಭವಾಗುತ್ತಿದೆ. ಅನೇಕ ವರ್ಷಗಳ ನಂತರ ನಿಮ್ಮ ಜಲ್ಸದಲ್ಲಿ ಭಾಗವಹಿಸುವ ಭಾಗ್ಯ ನನಗೆ ದೊರಕುತ್ತಿದೆ. ಕಳೆದ ಕೆಲವು ವರ್ಷಗಳಲ್ಲಿ ಹಾಲೆಂಡ್‌ನಲ್ಲಿ ನಮ್ಮ ಜಮಾಅತಿನ ಜನರ ಸಂಖ್ಯೆ ವರ್ಧಿಸಿದೆ. ಬಹಳ ಜನರು ಪಾಕಿಸ್ಥಾನದಿಂದ ಹಿಜ್‌ರತ್ ಮಾಡಿ ಆಗಮಿಸಿದ್ದಾರೆ. ಕೆಲವರು ಹೊಸದಾಗಿ ಜಮಾಅತಿಗೆ ಸೇರಿದ್ದಾರೆ. ಒಟ್ಟಾರೆ ಹೇಳುವುದಾದರೆ ಲೋಕದ ಬೇರೆ ಜಮಾಅತ್‌ಗಳ ಹಾಗೆಯೇ ಹಾಲೆಂಡಿನ ಜಮಾಅತ್ ಸಹ ಅಭಿವೃದ್ಧಿ ಗಳಿಸುತ್ತಿದೆ. ಹೊಸ ಸೆಂಟರ್‌ಗಳು ಸ್ಥಾಪಿತವಾಗಿವೆ. ಮಸ್‌ಜಿದ್ ಸಹ ನಿರ್ಮಿಸಲ್ಪಟ್ಟಿದೆ.

ನೀವು ನೆನಪಿಡಿರಿ, ಜನಸಂಖ್ಯೆಯಲ್ಲಿ ವರ್ಧನೆ, ಮಿಶನ್ ಮತ್ತು ಸೆಂಟರ್‌ಗಳು ಹಾಗೂ ಮಸ್‌ಜಿದ್ ನಿರ್ಮಾಣ ಲಾಭದಾಯಕವಾಗುವುದು ಅವುಗಳ ಉದ್ದೇಶ ಲಕ್ಷ್ಯಗಳನ್ನು ಈಡೇರಿಸುವಾಗ ಮಾತ್ರವಾಗಿದೆ. ಆದುದರಿಂದ ಇಲ್ಲಿ ವಾಸಿಸುವ ಪ್ರತಿಯೊಬ್ಬ ಅಹ್ಮದಿ ತನ್ನನ್ನು ಪರಿಶೋಧಿಸಬೇಕಾದುದು ಆವಶ್ಯಕವಾಗಿದೆ. ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿ ಯಾವುದೆಲ್ಲಾ ಉದ್ದೇಶಲಕ್ಷ್ಯಗಳನ್ನು ಈಡೇರಿಸಬೇಕಾಗಿದೆ ಎಂದು ಅವರು ನೋಡಬೇಕು ಮತ್ತು ಅನ್ವೇಷಿಸಬೇಕು. ನಾನು ಹೇಳಿದ ಹಾಗೆ ಕಳೆದ ಕೆಲವು ವರ್ಷಗಳಲ್ಲಿ ಬಹಳ ಅಹ್ಮದಿಯರು ಹಿಜ್‌ರತ್ ಮಾಡಿ ಇಲ್ಲಿಗೆ ಆಗಮಿಸಿದ್ದಾರೆ. ಅವರು ಹಿಜ್‌ರತ್ ಮಾಡಿ ಬಂದುದು ಏಕೆ? ಅದಕ್ಕೆ ಕಾರಣವೇನೆಂದರೆ ವಿಶಿಷ್ಟವಾಗಿ ಪಾಕಿಸ್ಥಾನದಲ್ಲಿ ಅಹ್ಮದಿಯರಿಗೆ ಧಾರ್ಮಿಕ ಸ್ವಾತಂತ್ರ್ಯ ಇಲ್ಲದಾಗಿದೆ. ಅಹ್ಮದಿಯರನ್ನು ಧರ್ಮದ ಹೆಸರಲ್ಲಿ ಹಿಂಸಿಸಲಾಗುತ್ತಿದೆ. ಅವರ ಹಕ್ಕುಗಳನ್ನು ಅಪಹರಿಸಲಾಗುತ್ತಿದೆ. ಮಸ್‌ಜಿದ್ ನಿರ್ಮಿಸುವ ವಿಷಯ ಬಿಡಿ, ಜನರಿಗೆ ತರಬೇತಿ ನೀಡಲು ಜಲ್ಸ ಮತ್ತು ಇಜ್ತಿಮಾ ಜರಗಿಸುವುದನ್ನು ಸಹ ತಡೆಯಲಾಗುತ್ತಿದೆ. ಪಾಕಿಸ್ಥಾನದ ನಿಯಮಗಳ ಪ್ರಕಾರ ನಾವು ಮನೆಯಲ್ಲಿ ಸಹ ನಮಾಝ್ ಮಾಡಬಾರದು. ಈದ್ ದಿನದಲ್ಲಿ ಮೃಗಬಲಿ ನೀಡಬಾರದು. ಅಲ್ಲಿನ ನಿಯಮಗಳು ನಮಗೆ ಅವುಗಳನ್ನು ಅನುಮತಿಸುವುದಿಲ್ಲ. ಮೊಕದ್ದಮೆಗಳನ್ನು ಹೂಡುತ್ತಾರೆ. ಅಲ್ಲಿನ ನಿರ್ಬಂಧಿತ ಅವಸ್ಥೆಯಿಂದ ಮುಕ್ತರಾಗಿ ನೀವು ಇಲ್ಲಿ ಸ್ವತಂತ್ರರಾಗಿ ಜೀವಿಸುತ್ತಿದ್ದೀರಿ. ಅದಕ್ಕಾಗಿ ನೀವು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುತ್ತಿರಬೇಕು ಹಾಗೂ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿದ ಕಾರಣದಿಂದ ನಿಮ್ಮ ಮೇಲೆ ಹೊರಿಸಲಾದ ಹೊಣೆಗಾರಿಕೆಗಳನ್ನು ಈಡೇರಿಸಲು ಪೂರ್ಣವಾಗಿ ಪ್ರಯತ್ನಿಸುತ್ತಿರಬೇಕು. ನಿಮ್ಮ ಆಧ್ಯಾತ್ಮಿಕವಾದ, ಜ್ಞಾನ ಸಂಬಂಧವಾದ ಮತ್ತು ಸ್ವಭಾವ ಸಂಬಂಧವಾದ ಸ್ಥಿತಿಯನ್ನು ಉತ್ತಮಗೊಳಿಸಲು ಪ್ರಯತ್ನಿಸಬೇಕು. ನಮ್ಮ ಕರ್ಮಗಳು ಅಲ್ಲಾಹನ ಆಜ್ಞೆಗಳ ಪ್ರಕಾರವಾಗಿಲ್ಲವಾದರೆ, ನಾವು ನಮ್ಮೊಳಗೆ ಪರಿಶುದ್ಧ ಬದಲಾವಣೆಯನ್ನು ಮೊದಲಿಗಿಂತ ಹೆಚ್ಚಾಗಿ ಸೃಷ್ಟಿಸಲು ಪ್ರಯತ್ನಿಸುವುದಿಲ್ಲವಾದರೆ, ಅಲ್ಲಾಹನ ಬಗ್ಗೆ ಮತ್ತು ಅವನ ರಸೂಲರ ಬಗ್ಗೆ ಪ್ರೀತಿಯನ್ನು ಮೊದಲಿಗಿಂತ ಮಿಗಿಲಾಗಿ ನಾವು ಪ್ರಕಟಿಸುವುದಿಲ್ಲವಾದರೆ ನಮಗೆ ಈ ಸ್ವಾತಂತ್ರ್ಯ ಲಭಿಸಿ ಪ್ರಯೋಜನವಾದರೂ ಏನು? ಈ ಜಲ್ಸಗಳಲ್ಲಿ ಭಾಗವಹಿಸಿದುದರ ಲಾಭವಾದರೂ ಏನು? ಮಸ್‌ಜಿದ್‌ಗಳನ್ನು ನಿರ್ಮಿಸುವುದರಿಂದ ಸಿಗುವ ಪ್ರಯೋಜನವೇನು? ನಮಗೆ ಲಭಿಸಿದ ಈ ಸ್ವಾತಂತ್ರ್ಯದ ವಾಸ್ತವಿಕ ಲಾಭ ನಮಗೆ ಸಿಗುವುದು, ಬೈಅತ್‌ನ ಹೊಣೆಗಾರಿಕೆಗಳನ್ನು ನಾವು ಈಡೇರಿಸುವಾಗ ಮಾತ್ರವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ಸ್ಥಳದಲ್ಲಿ ಜಲ್ಸದ ಉದ್ದೇಶಲಕ್ಷ್ಯಗಳನ್ನು ವಿವರಿಸುತ್ತಾ ತನ್ನನ್ನು ಬೈಅತ್ ಮಾಡಿದವರಿಗೆ ಉಪದೇಶಿಸುತ್ತಾ ಹೀಗೆ ಹೇಳಿದರು: ಬೈಅತ್ ಮಾಡಿ ಜಮಾಅತಿಗೆ ಪ್ರವೇಶಿಸಿದ ಎಲ್ಲಾ ನಿಷ್ಠಾವಂತರಾದ ಜನರಿಗೆ ಸ್ಪಷ್ಟಪಡಿಸುತ್ತೇನೆ, ಬೈಅತ್ ಮಾಡುವುದರ ಉದ್ದೇಶ ಲೋಕದ ಬಗ್ಗೆ ಪ್ರೀತಿ ತಣ್ಣಗಾಗಬೇಕು ಮತ್ತು ನಮ್ಮ ಕಾರುಣ್ಯಮಯ ಯಜಮಾನನಾದ ಅಲ್ಲಾಹನ ಬಗ್ಗೆ ಮತ್ತು ಅವನ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಪ್ರೀತಿ ವರ್ಧಿಸಬೇಕು. ಎಂತಹ ಪರಿತ್ಯಾಗದ ಸ್ಥಿತಿ ತಲೆದೋರಬೇಕೆಂದರೆ ಪರಲೋಕದ ಯಾತ್ರೆ ಅಸಹನೀಯವಾಗಿ ತೋರಬಾರದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಬಹಳ ಸ್ಪಷ್ಟವಾಗಿ ಉಪದೇಶಿಸಿದ್ದಾರೆ. ನನ್ನನ್ನು ಬೈಅತ್ ಮಾಡಿ ಕೇವಲ ಬಾಯಿಮಾತಿನಲ್ಲಿ ವಾದಿಸಿದರೆ ಸಾಕಾಗಲಾರದು. ನೀವು ನಿಷ್ಠಾವಂತರಾಗಬೇಕು. ಅಲ್ಲಾಹನ ಬಗ್ಗೆ ಮತ್ತು ಅವನ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಪ್ರೀತಿ ಇತರ ಎಲ್ಲಾ ಪ್ರೀತಿಗಳಿಗಿಂತ ಮಿಗಿಲಾಗಿರುವಾಗ ಮಾತ್ರವೇ ನಿಷ್ಠೆಯಲ್ಲಿ ಅಭಿವೃದ್ಧಿ ಉಂಟಾಗುತ್ತದೆ. ಇದೇ ಕಾರಣದಿಂದ ಬೈಅತ್ ಶರತ್ತುಗಳಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೀಗೆ ಒಂದು ಶರತ್ತು ಇರಿಸಿದರು: ಅಲ್ಲಾಹನ ವಚನಗಳನ್ನೂ ಅವನ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ನುಡಿಗಳನ್ನೂ ಪ್ರತಿಯೊಂದು ಕರ್ಮಕ್ಕೆ ಮಾರ್ಗಸೂಚಿಯನ್ನಾಗಿ ಮಾಡಿಕೊಳ್ಳುವೆನು ಎಂದು. ಆದುದರಿಂದ ಈ ಜಲ್ಸಗಳನ್ನು ಜರಗಿಸುವುದರ ಉದ್ದೇಶ ಬೈಅತ್ ಮಾಡಿದುದರ ಉದ್ದೇಶಲಕ್ಷ್ಯಗಳನ್ನು ಪದೇ ಪದೇ ನಮ್ಮ ನೆನಪಿಗೆ ತರಲಿಕ್ಕೋಸ್ಕರವಾಗಿದೆ. ಲೋಕದ ಬಗ್ಗೆ ಪ್ರೀತಿ

ಸಂಪೂರ್ಣವಾಗಿ ಹೊರಟು ಹೋಗುವುದು, ಅಲ್ಲಾಹನ ಮತ್ತು ಅವನ ರಸೂಲರ ಬಗ್ಗೆ ಪ್ರೀತಿ ಅದರ ಮೇಲೆ ಜಯಗಳಿಸುವುದು ಸಾಮಾನ್ಯವಾದ ವಿಷಯವೇನೂ ಅಲ್ಲ. ಅದಕ್ಕೋಸ್ಕರ ಬಹಳ ಪರಿಶ್ರಮದ ಆವಶ್ಯಕತೆ ಇದೆ. ನಾವು ಬೈಅತ್ ಮಾಡಿರುವುದರಿಂದ ಈ ಪರಿಶ್ರಮ ಮಾಡಬೇಕಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನಮ್ಮ ಗಮನ ಹರಿಯಿಸಿದ ಇನ್ನೊಂದು ವಿಷಯ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಬಗ್ಗೆ ಪ್ರೀತಿಯನ್ನು ಹೊಂದುವುದಾಗಿದೆ. ಅವರು ಸ್ಪಷ್ಟವಾಗಿ ಹೇಳಿದರು: ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಇತರ ಎಲ್ಲರಿಗಿಂತ ಹೆಚ್ಚಾಗಿ ಪ್ರೀತಿಸಬೇಕು. ಏಕೆಂದರೆ ಅಲ್ಲಾಹನ ಸಮೀಪಕ್ಕೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಮೂಲಕ ಮಾತ್ರ ತಲಪಲು ಸಾಧ್ಯವಿದೆ. ಅವರ ಆಜ್ಞೆಗಳನ್ನು ಅನುಷ್ಠಾನಕ್ಕೆ ತಂದು ಅವರ ನಡೆವಳಿಕೆ ಪ್ರಕಾರ ಚಲಿಸಿ ಮಾತ್ರವೇ ಅಲ್ಲಾಹನ ಸಾಮೀಪ್ಯಕ್ಕೆ ತಲಪಲು ಸಾಧ್ಯವಾಗುತ್ತದೆ. ಪ್ರಾರ್ಥನೆಗಳು ಅಂಗೀಕರಿಸಲ್ಪಡಲು ಮತ್ತು ಅಂತಿಮ ಗತಿ ಉತ್ತಮವಾಗಲು ಇರುವ ಮಾರ್ಗ ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರೇ ಆಗಿದ್ದಾರೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಅಲ್ಲಾಹನ ಪ್ರೀತಿಗೆ ಪಾತ್ರರಾಗಲು ಹಝ್ರತ್ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಅನುಸರಿಸುವುದೇ ಅದಕ್ಕಿರುವ ಏಕಮಾತ್ರ ಮಾರ್ಗವಾಗಿದೆ. ನಿಮ್ಮನ್ನು ಅಲ್ಲಾಹನ ಸಾಮೀಪ್ಯ ಗಳಿಸುವಂತೆ ಮಾಡುವ ಬೇರೊಂದು ಮಾರ್ಗ ಯಾವುದೂ ಇಲ್ಲ. ಮನುಷ್ಯನ ಉದ್ದೇಶಲಕ್ಷ್ಯ ಏಕನೂ ಸಹಭಾಗಿ ಇಲ್ಲದವನೂ ಆಗಿರುವ ದೇವನನ್ನು ಅನ್ವೇಷಿಸುವುದಾಗಿದೆ. ನಾವು ಏಕನಾದ ಅಲ್ಲಾಹನನ್ನು ಅನ್ವೇಷಿಸಬೇಕು. ಬೇರೆ ಯಾರನ್ನೂ ಅನ್ವೇಷಿಸಬಾರದು. ಅಲ್ಲಾಹನ ಎದುರಿಗೆ ಬೇರೆ ಯಾರನ್ನೂ ನಿಲ್ಲಿಸಬಾರದು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿದರು: ಶಿರ್ಕ್ ಬಿದ್‌ಅತ್‌ನಿಂದ ದೂರಸರಿಯಬೇಕು. ಆಚಾರಗಳಿಂದಲೂ ನಿರರ್ಥಕ ಕೃತ್ಯಗಳಿಂದಲೂ ದೂರ ಸರಿಯಬೇಕು. ನಾನು ಪುನಃ ಹೇಳುತ್ತೇನೆ: ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಸತ್ಯಮಾರ್ಗದ ಮೂಲಕ ಹೊರತು ಬೇರೆ ಯಾವುದೇ ರೀತಿಯಲ್ಲಿ ಜಯಶಾಲಿ ಆಗಲು ಸಾಧ್ಯವಿಲ್ಲ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ನೀವು ನಿಮ್ಮಲ್ಲಿ ವಿರಕ್ತ ಮನೋಭಾವ ಹೊಂದಿರಿ. ನೀವು ಲೋಕದ ಆಟವಿನೋದಗಳಿಂದಲೂ ಜಗಳಗಳಿಂದಲೂ ನಿಮ್ಮನ್ನು ಬೇರ್ಪಡಿಸಿರಿ. ನಿಮ್ಮ ಪ್ರತಿಯೊಂದು ಕರ್ಮ ಅಲ್ಲಾಹನ ಮತ್ತು ಅವನ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಜ್ಞೆಗಳಿಗೆ ಅನುಸಾರವಾಗಿರಬೇಕು. ಲೌಕಿಕ ಕಾರ್ಯಗಳು, ವ್ಯವಹಾರ ಮತ್ತು ಸಂಪಾದನೆ ಖಂಡಿತವಾಗಿಯೂ ನಿಷಿದ್ಧವಲ್ಲ. ಅಲ್ಲಾಹನೇ ಹಾಗೆ ಮಾಡಲು ಆಜ್ಞಾಪಿಸಿದ್ದಾನೆ. ಸಹಾಬರು ಸಹ ಲೌಕಿಕ ಕರ್ಮಗಳನ್ನು ಮಾಡುತ್ತಿದ್ದರು. ವ್ಯಾಪಾರ ಮಾಡುತ್ತಿದ್ದರು. ಆದರೆ ಅಲ್ಲಾಹನ ಬಗ್ಗೆ ಪ್ರೀತಿ ಮತ್ತು ಅವನ ರಸೂಲರ ಬಗ್ಗೆ ಪ್ರೀತಿ ಅವುಗಳ ಬಗ್ಗೆ ಇದ್ದ ಪ್ರೀತಿಗಿಂತ ಮಿಗಿಲಾಗಿತ್ತು. ಅಲ್ಲಾಹನ ಆರಾಧನೆ ಮಾಡಬೇಕು, ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಆಜ್ಞೆಗಳನ್ನು ಪಾಲಿಸಬೇಕು ಎಂಬುದು ಅವರ ಸದಾ ಕಾಲದ ಚಿಂತನೆಯಾಗಿತ್ತು. ಅವರು ಈ ಚಿಂತೆಯಲ್ಲಿದ್ದರು: ನಾವು ಯಾರನ್ನು ಪ್ರೀತಿಸುತ್ತಿದ್ದೇವೆಯೋ ಅವರು ನಮ್ಮ ಯಾವುದೇ ಕೆಲಸದ ಕಾರಣದಿಂದ ನಮ್ಮ ಬಗ್ಗೆ ಕೋಪಗೊಳ್ಳುವಂತಾಗದಿರಲಿ ಎಂದು.

ಒಟ್ಟಿನಲ್ಲಿ, ಜಲ್ಸದ ಆಧ್ಯಾತ್ಮಿಕ ಪರಿಸರದಿಂದ ಅನುಗ್ರಹ ಗಳಿಸಲು, ನಮ್ಮ ಕರ್ಮಗಳನ್ನು ಉತ್ತಮ ಪಡಿಸಲು ನಾವು ಈ ಮೂರು ದಿನಗಳ ಜಲ್ಸಕ್ಕೋಸ್ಕರ ಜಮಾಯಿಸಿದ್ದೇವೆ. ಆದುದರಿಂದ ನಾವು ಯಾವಾಗಲೂ ನೆನಪಿನಲ್ಲಿಡಬೇಕು. ನಾವು ಇಲ್ಲಿ ಜಮಾಯಿಸಿರುವ ಉದ್ದೇಶವೇನೆಂದು. ಆ ಉದ್ದೇಶ ಇಲ್ಲಿನ ಆಧ್ಯಾತ್ಮಿಕ ಪರಿಸರದಿಂದ ಲಾಭ ಗಳಿಸುವುದು ಮತ್ತು ನಮ್ಮ ಕರ್ಮಗಳನ್ನು ಉತ್ತಮಪಡಿಸಲು ಪ್ರಯತ್ನಿಸುವುದು ಆಗಿದೆ. ನಮ್ಮ ಕೆಡುಕುಗಳನ್ನು ದೂರ ಸರಿಸಬೇಕು. ಝಿಕ್ರೆ ಇಲಾಹಿ ಮತ್ತು ಇಸ್ತಿಗ್‌ಫಾರ್ ಕಡೆಗೆ ಗಮನ ಹರಿಸಬೇಕು. ಈ ಮೂರು ದಿನಗಳನ್ನು ಒಂದು ಟ್ರೈನಿಂಗ್ ಕ್ಯಾಂಪ್ ಆಗಿ ಗಣಿಸಬೇಕೆಂದು ವಿವೇಕ ಆವಶ್ಯ ಪಡುತ್ತದೆ. ನಮ್ಮ ಕರ್ಮಗಳಲ್ಲಿರುವ ಕೊರತೆಗಳನ್ನು ಪರಿಹರಿಸಲು ಪ್ರಯತ್ನಿಸಬೇಕು.

ಜಲ್ಸದ ಉದ್ದೇಶ ಈಮಾನ್ (ವಿಶ್ವಾಸ)ದಲ್ಲಿ ದೃಢತೆ ಗಳಿಸುವುದಾಗಿದೆ. ಜ್ಞಾನವನ್ನು ವರ್ಧಿಸುವುದಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ, ಇದು ಲೌಕಿಕ ಜಾತ್ರೆಗಳ ಹಾಗಿರುವುದಿಲ್ಲ. ನಾವು ಜಮಾಯಿಸಿರುವುದು ಬೊಬ್ಬೆ ಹೊಡೆಯಲು ಅಲ್ಲ. ನಮ್ಮ ಜನಸಂಖ್ಯೆಯ ಪ್ರದರ್ಶನವೂ ಅದರ ಉದ್ದೇಶವಲ್ಲ. ಜಲ್ಸದಲ್ಲಿ ಆಗಮಿಸುವ ಪ್ರತಿಯೊಬ್ಬ ಪುರುಷ, ಮಹಿಳೆ, ಯುವ ಜನರು, ವೃದ್ಧರು ತಮ್ಮ ವಿಶ್ವಾಸವನ್ನು ದೃಢ ಪಡಿಸಲು ಹಾಗೂ ಅಲ್ಲಾಹನ ಮತ್ತು ಅವನ ರಸೂಲರ ಬಗ್ಗೆ ಪ್ರೀತಿಯನ್ನು ವರ್ಧಿಸಲು ಪ್ರಯತ್ನಿಸಬೇಕು. ನಾವು ಆಡಂಬರ ಪ್ರದರ್ಶಿಸಲು ಮತ್ತು ಹರಟೆ ಮಾತುಗಳನ್ನು ಆಡಲು ಜಮಾಯಿಸಿಲ್ಲ. ಇಂತಹ ಯೋಚನೆ ಹೊಂದಿ ಜಲ್ಸಕ್ಕೆ ಬರುವುದು ವ್ಯರ್ಥವಾಗಿದೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಸತ್ಕರ್ಮಗಳನ್ನು ಮಾಡುವ ಬಗ್ಗೆ ಗಮನ ಹರಿಸುತ್ತಾ ಹೇಳಿದರು: ಸತ್ಕರ್ಮ ಮಾಡುವುದರ ಉದ್ದೇಶ ಅಲ್ಲಾಹನ ಸಂಪ್ರೀತಿ ಗಳಿಸುವುದು ಮತ್ತು ಅವನ ಆಜ್ಞೆಗಳನ್ನು ಪಾಲಿಸುವುದಾಗಿರಬೇಕು. ಪುಣ್ಯ ದೊರಕುವುದೆಂಬ ಉದ್ದೇಶ ಅದಕ್ಕಿರಬಾರದು. ಆದುದರಿಂದ ಅಲ್ಲಾಹನನ್ನು ಪ್ರೀತಿಸುವುದು ಆವಶ್ಯಪಡುವುದೇನೆಂದರೆ ನಾವು ಅಲ್ಲಾಹನ ಆಜ್ಞೆಗಳನ್ನು ಪಾಲಿಸುವವರಾಗಬೇಕು. ಆರಾಧನೆ ಮಾಡುವುದು ಮತ್ತು ಅಲ್ಲಾಹನ ದಾಸರ ಹಕ್ಕುಗಳನ್ನು ಈಡೇರಿಸುವುದು ಅಲ್ಲಾಹನ ಆಜ್ಞೆಗಳಲ್ಲಿ ಸೇರಿವೆ. ನಾವು ಅಲ್ಲಾಹನ ಆಜ್ಞೆಗಳನ್ನು ಅವನು ಪ್ರತಿಫಲ ನೀಡುವನೆಂಬ ಆಶೆಯಿಂದ ಅನುಷ್ಠಾನಕ್ಕೆ ತರುವವರಾಗಬಾರದು. ಅಲ್ಲಾಹನು ಯಾವುದೇ ಸತ್ಕರ್ಮವನ್ನು ನಿರರ್ಥಕಗೊಳಿಸುವುದಿಲ್ಲ. ಅವನು ಹೇಳಿದ್ದಾನೆ: إِنَّ اللَّهَ لَا يُضِيعُ أَجْرَ الْمُحْسِنِينَ - **ಇನ್ನಲ್ಲಾಹ ಲಾ ಯುಝೀಉ ಅಜ್‌ರಲ್ ಮುಹ್ಸಿನೀನ್.** ಖಂಡಿತವಾಗಿಯೂ ಅಲ್ಲಾಹನು ಸತ್ಕಾರ್ಯ ಮಾಡುವವರ ಪ್ರತಿಫಲ ನಷ್ಟವಾಗಲು ಬಿಡುವುದಿಲ್ಲ. (ಪವಿತ್ರ ಖುರ್‌ಆನ್ 9:120). ಆದರೆ ಸತ್ಕರ್ಮಗಳನ್ನು ಮಾಡುವವ ಪ್ರತಿಫಲ ಗಳಿಸುವ ಉದ್ದೇಶ ಹೊಂದಬಾರದು. ಆದುದರಿಂದ

ಯಾವುದೇ ಪ್ರತಿಫಲದ ಆಶೆ ಹೊಂದದೆ ಸತ್ಕರ್ಮಗಳನ್ನು ಮಾಡುವುದೇ ನಿಜವಾದ ಸತ್ಕರ್ಮವಾಗಿದೆ. ಆದರೆ ಅಲ್ಲಾಹನು ಸತ್ಕರ್ಮಗಳಿಗೆ ಖಂಡಿತವಾಗಿಯೂ ಪ್ರತಿಫಲ ನೀಡುತ್ತಾನೆ. ನಮ್ಮ ಅಲ್ಲಾಹನು ನಮ್ಮೊಂದಿಗೆ ಹೀಗೆ ವರ್ತಿಸುವವನಾಗಿರುವಾಗ ನಮ್ಮ ಹೊಣೆಗಾರಿಕೆ, ನಾವು ಅವನ ಸಂಪ್ರೀತಿ ಗಳಿಸಲು ಅವನು ನೀಡಿದ ಎಲ್ಲಾ ಆಜ್ಞೆಗಳನ್ನು ಪಾಲಿಸಬೇಕು ಎಂಬುದಾಗಿದೆ. ಅವನು ಮಾಡಬಾರದೆಂದು ಹೇಳಿದ ಎಲ್ಲಾ ಕೆಡುಕುಗಳಿಂದ ನಮ್ಮನ್ನು ರಕ್ಷಿಸಿಕೊಳ್ಳಬೇಕಾಗಿದೆ. ಈ ದೇಶಗಳಿಗೆ ಆಗಮಿಸಿದ ನಾವು ನಮ್ಮ ಸ್ಥಿತಿಗತಿಗಳ ಬಗ್ಗೆ ಗಮನವಿರಿಸುವುದು ಬಹಳ ಹೆಚ್ಚು ಆವಶ್ಯಕವಾಗಿದೆ. ಕೆಲವು ಸಾರಿ ಸಮೃದ್ಧಿ ಸತ್ಕರ್ಮಗಳನ್ನು ಮಾಡುವುದಕ್ಕೆ ತಡೆಯಾಗುತ್ತವೆ. ತನ್ನ ಸ್ಥಿತಿ ಉತ್ತಮಗೊಳ್ಳುವಾಗ ಮನುಷ್ಯನು ತನ್ನ ಹಿಂದಿನ ಸ್ಥಿತಿಯನ್ನು ಮರೆತು ಬಿಡುತ್ತಾನೆ. ಇಂತಿಂತಹ ಲೌಕಿಕ ಕೆಲಸಗಳನ್ನು ಮಾಡದಿದ್ದರೆ ನಮಗೆ ನಷ್ಟ ಸಂಭವಿಸುವುದು ಎಂದು ನಾವು ಭಾವಿಸುತ್ತೇವೆ. ಆದರೆ ಅಲ್ಲಾಹನು ಹೇಳುತ್ತಾನೆ: ಆಹಾರ ನೀಡುವವನು ನಾನಾಗಿದ್ದೇನೆ.

ಒಟ್ಟಿನಲ್ಲಿ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿದ ಹೊಣೆಗಾರಿಕೆ ನಿರ್ವಹಿಸಲು ಅಲ್ಲಾಹನನ್ನು ಆರಾಧಿಸುವುದು ಆವಶ್ಯಕವಾಗಿದೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅದರ ಬಗ್ಗೆ ನಮ್ಮ ಗಮನ ಹರಿಯಿಸಿ ಹೇಳಿದ್ದಾರೆ: ಅಲ್ಲಾಹನನ್ನು ವೈಯ್ಯಕ್ತಿಕವಾಗಿ ಪ್ರೀತಿಸುತ್ತಾ ಆರಾಧನೆ ಮಾಡಿರಿ. ಇದು ಮುಖ್ಯ ವಿಷಯವಾಗಿದೆ. ವೈಯಕ್ತಿಕ ಪ್ರೀತಿಯಿಂದ ಆರಾಧಿಸುವಾಗ ಲೌಕಿಕ ಉದ್ದೇಶಗಳು ಎಲ್ಲವೂ ಕೊನೆಗೊಳ್ಳುವುವು. ಆಗ ಧಾರ್ಮಿಕ ಕಾರ್ಯಗಳಿಗೆ ಲೌಕಿಕ ಕಾರ್ಯಗಳ ಮೇಲೆ ಆದ್ಯತೆ ನೀಡುವುದರ ವಾಸ್ತವಿಕತೆ ಪ್ರಕಟವಾಗುವುದು. ಲೌಕಿಕ ಉದ್ದೇಶಗಳು ಕೊನೆಗೊಂಡಾಗ ಅಲ್ಲಾಹನು ಎಂತಹ ಮಾರ್ಗಗಳಿಂದ ಆಹಾರ ನೀಡುವನೆಂದರೆ ಅಂತಹ ಮಾರ್ಗಗಳ ಬಗ್ಗೆ ಊಹಿಸಲು ಸಹ ಸಾಧ್ಯವಿರುವುದಿಲ್ಲ. ಅಲ್ಲಾಹನು ಅದರ ಬಗ್ಗೆ ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ: وَمَن يَتَّقِ اللَّهَ يَجْعَل لَّهُ مَخْرَجًا وَيَرْزُقْهُ مِنْ حَيْثُ لَا يَحْتَسِبُ – **ವ ಮನ್ ಯತ್ತಖಿಲ್ಲಾಹ ಯಜ್‌ಅಲ್ ಲಹೂ ಮಖ್‌ರಜನ್, ವ ಯರ್‌ಝುಖ್‌ಹು ಮಿನ್ ಹೈಸು ಲಾ ಯಹ್‌ತಸಿಬ್.** ಯಾರಾದರೂ ಅಲ್ಲಾಹನ ಭಯ ಭಕ್ತಿ ಹೊಂದಿದ್ದರೆ ಅವನಿಗೆ ಅಲ್ಲಾಹನು (ಸಂಕಷ್ಟಗಳಿಂದ) ಪಾರಾಗುವ ಮಾರ್ಗವನ್ನು ಮಾಡಿಕೊಡುವನು. ಅವನು ನಿರೀಕ್ಷಿಸದ ಕಡೆಯಿಂದ ಅಲ್ಲಾಹನು ಅವನಿಗೆ ಜೀವನೋಪಾಯವನ್ನು ದಯಪಾಲಿಸುವನು. (65:3.4)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಸುಖದ ಮೂಲ ಕಾರಣ ತಖ್ವಾವಾಗಿದೆ. ಅಲ್ಲಾಹನು ತನ್ನ ದಾಸರನ್ನು ನಾಶಕ್ಕೆ ಗುರಿಪಡಿಸುವುದಿಲ್ಲ ಎನ್ನುವುದು ಸತ್ಯವಾಗಿದೆ. ಅನ್ಯರ ಮುಂದೆ ಕೈ ಚಾಚುವುದರಿಂದ ಅಲ್ಲಾಹನು ಅವರನ್ನು ಸಂರಕ್ಷಿಸುತ್ತಾನೆ. ನನ್ನ ವಿಶ್ವಾಸವೇನೆಂದರೆ ಒಬ್ಬನು ಸತ್ಯವಾಗಿಯೂ ಮುತ್ತಖಿಯಾಗಿದ್ದರೆ ಅವನ ಏಳು ಪೀಳಿಗೆಗಳ ತನಕ ಸಹ ಅಲ್ಲಾಹನು ಕಾರುಣ್ಯ ಮತ್ತು ಅನುಗ್ರಹ ನೀಡುತ್ತಾನೆ – ಅವರು ಸ್ವತಃ ದುರದೃಷ್ಟಕರವಾಗಿ ಕೆಟ್ಟ ಕೆಲಸ ಮಾಡಿ ಅಲ್ಲಾಹನ ಅನುಗ್ರಹದಿಂದ ವಂಚಿತರಾಗುವಾಗ ಹೊರತು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಮತ್ತೂ ಹೇಳುತ್ತಾರೆ: ಎಲ್ಲಾ ಹಗ್ಗದೇಣಿಗಳನ್ನು ಸುಟ್ಟು ಹಾಕಬೇಕು. ದೇವ ಪ್ರೇಮದ ಏಣಿಯನ್ನು ಮಾತ್ರ ಬಾಕಿಯಾಗಿರಿಸಿರಿ. ಸತ್ಯವೇನೆಂದರೆ ಯಾರು ಅಲ್ಲಾಹನಿಗೆ ಸೇರಿದವನಾಗುತ್ತಾನೋ ಅಲ್ಲಾಹನು ಅವನಿಗೆ ಸೇರಿದವನಾಗುತ್ತಾನೆ. ನೀವು ಹೇಗೆ ಪರಿವರ್ತಿತರಾಗಬೇಕೆಂದರೆ ಅಲ್ಲಾಹನ ಅನುಗ್ರಹಗಳು ಮತ್ತು ಅವನ ಕಾರುಣ್ಯದ ಚಿಹ್ನೆಗಳು ನಿಮಗೆ ಇಳಿದು ಬರುವಂತಾಗಬೇಕು. ಒಬ್ಬ ವ್ಯಕ್ತಿಯ ದೀರ್ಘಾಯುಸ್ಸು ಗಳಿಸುವ ಉದ್ದೇಶ ಕೇವಲ ಇಹಲೋಕದ ರಸಾನುಭೂತಿ ಮತ್ತು ಭೋಗಗಳು ಮಾತ್ರವಾಗಿದ್ದರೆ ಅವನ ದೀರ್ಘಾಯುಸ್ಸು ಯಾವ ಪ್ರಯೋಜನ ನೀಡುವುದು? ಅವನು ತನ್ನ ಜೀವಿತವನ್ನು ಮೃಷ್ಟಾನ್ನ ಭಕ್ಷಿಸುವುದರಲ್ಲಿಯೂ ಧಾರಾಳ ನಿದ್ರೆ ಮಾಡುವುದರಲ್ಲಿಯೂ ಪತ್ನಿ ಮಕ್ಕಳೊಂದಿಗೆ ಭವ್ಯ ಭವನಗಳಲ್ಲಿ ವಾಸಿಸುವುದರಲ್ಲಿಯೂ ಕುದುರೆ ಮೊದಲಾದುವುಗಳನ್ನು ಹೊಂದುವುದರಲ್ಲಿಯೂ ಅಥವಾ ಉತ್ತಮ ತೋಟಗಳನ್ನು ಹೊಂದುವುದರಲ್ಲಿಯೂ ಉತ್ತಮ ಬೆಳೆಪಡೆಯುವುದರಲ್ಲಿಯೂ ಕಳೆಯುತ್ತಾನೆ. ಅಂತಹ ವ್ಯಕ್ತಿ ಅಲ್ಲಾಹನ ದಾಸನಲ್ಲ. ಅವನು ಅಲ್ಲಾಹನನ್ನು ಆರಾಧನೆ ಮಾಡುವವನಲ್ಲ. ಅವನನ್ನು ದೇವದಾಸನೆಂದು ಕರೆಯಲು ಸಹ ಸಾಧ್ಯವಿಲ್ಲ. ಅವನು ಕೇವಲ ತನ್ನ ಸ್ವಾರ್ಥಹಿತಾಸಕ್ತಿಗಳ ಆರಾಧಕನಾಗಿರುತ್ತಾನೆ. ಅವನು ತನ್ನ ಉದ್ದೇಶ ಲಕ್ಷ್ಯವನ್ನಾಗಿ ಇಂದ್ರಿಯಾಸಕ್ತಿಗಳ ಈಡೇರುವಿಕೆಯನ್ನು ಇರಿಸಿದ್ದಾನೆ. ಶಾರೀರಿಕ ರಸಾನುಭೂತಿಯನ್ನು ಇರಿಸಿದ್ದಾನೆ. ಆದರೆ ಅಲ್ಲಾಹನು ಮನುಷ್ಯನ ಸೃಷ್ಟಿಯ ಪರಮೋದ್ದೇಶ ತನ್ನ ಆರಾಧನೆ ಎಂದು ಸೂಚಿಸಿದ್ದಾನೆ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೇಳುತ್ತಾನೆ: – وَمَا خَلَقْتُ الْجِنَّ وَالْإِنسَ إِلَّا لِيَعْبُدُونِ **ವಮಾ ಖಲಖ್ತುಲ್ ಜಿನ್ನ ವಲ್ ಇನ್ಸ ಇಲ್ಲಾ ಲಿಯಅ್‌ಬುದೂನ್.** ನನ್ನನ್ನು ಆರಾಧಿಸಲಿಕ್ಕೋಸ್ಕರ ಹೊರತು ನಾನು ಜಿನ್ನ್ ಮತ್ತು ಇನ್ಸ್ ವರ್ಗಗಳನ್ನು ಸೃಷ್ಟಿಸಲಿಲ್ಲ. (51:57). ಅಲ್ಲಾಹನು ಜೀವಿತೋದ್ದೇಶವನ್ನು ಸೀಮಿತಗೊಳಿಸಿದ್ದಾನೆ. ದೇವಾರಾಧನೆ ಮಾತ್ರ ಜೀವಿತೋದ್ದೇಶವಾಗಬೇಕು. ಕೇವಲ ಇದಕ್ಕೋಸ್ಕರ ಪ್ರಪಂಚ ಸೃಷ್ಟಿಸಲ್ಪಟ್ಟಿದೆ. ಆದರೆ ಇದಕ್ಕೆ ವಿರುದ್ಧವಾಗಿ ಜನರಿಗೆ ಬೇರೆಯೇ ಇರಾದೆಗಳೂ ಬೇರೆಯೇ ಆಶಾಭಿಲಾಷೆಗಳೂ ಇವೆ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಈ ಮಾತುಗಳು ನಮ್ಮನ್ನು ಚಿಂತಾಮಗ್ನರನ್ನಾಗಿ ಮಾಡುವವುಗಳಾಗಿವೆ. ನಾವು ಯಾವ ರೀತಿ ನಮ್ಮ ಜೀವಿತೋದ್ದೇಶ ಗಳಿಸುವವರಾಗಬೇಕೆಂದು ನಾವು ಚಿಂತಿಸಬೇಕು. ನಾವು ಕೇವಲ ಇಹಲೋಕದ ಬಗ್ಗೆ ಮಾತ್ರ ಚಿಂತಿಸಿದರೆ ಸಾಕಾಗಲಾರದು. ನಮ್ಮ ಯೋಚನೆಗಳು ನಮ್ಮ ದುಡಿಮೆ ಕೇವಲ ಇಹಲೋಕ ಸುಖಗಳಿಸುವುದಕ್ಕೆ ಮಾತ್ರ ಸೀಮಿತವಾಗಬಾರದು. ನಾವು ನಮ್ಮ ಜೀವಿತದ ಮೂಲ ಉದ್ದೇಶವನ್ನು ಗಳಿಸಲಿಕ್ಕೋಸ್ಕರ ನಮ್ಮ ಎಲ್ಲಾ ಶಕ್ತಿ ಸಾಮರ್ಥ್ಯಗಳನ್ನು ಕೃತಿರೂಪಕ್ಕೆ ತರುವವರಾಗಬೇಕು. ನಾವು ಈ ದೇಶಗಳಿಗೆ ಆಗಮಿಸಿ ಅಲ್ಲಾಹನ ಅನುಗ್ರಹಗಳನ್ನು ಗಳಿಸಲು ಪ್ರಯತ್ನಿಸುತ್ತಾ ಅವನನ್ನು ಆರಾಧಿಸುವ ಹೊಣೆಗಾರಿಕೆಯನ್ನು ಈಡೇರಿಸುವವರಾಗಬೇಕು. ನಮ್ಮ ಇರಾದೆಗಳು, ನಮ್ಮ ಆಶಾಭಿಲಾಷೆಗಳು ಬೇರೆಯೇ ಆಗದಿರಲಿ. ನಾವು ನಮ್ಮನ್ನು ಸೃಷ್ಟಿಸಿದವನನ್ನು ಗುರುತಿಸುವವರಾಗಿ ನಮ್ಮನ್ನು ಸೃಷ್ಟಿಸಿದ ಹೊಣೆಗಾರಿಕೆಗಳನ್ನು ಈಡೇರಿಸುವವರಾಗಬೇಕು. ಯಾವ

ಉದ್ದೇಶಕ್ಕೋಸ್ಕರ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಈ ಕಾಲಘಟ್ಟದಲ್ಲಿ ನಿಯೋಜಿಸಲ್ಪಟ್ಟಿರುವರೋ ಆ ಉದ್ದೇಶವನ್ನು ಈಡೇರಿಸುವವರಾಗಬೇಕು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ನಾನು ಕಳುಹಿಸಲ್ಪಟ್ಟಿರುವುದು ವಿಶ್ವಾಸವನ್ನು ದೃಢವಾಗುವಂತೆ ಮಾಡಲು ಮತ್ತು ಅಲ್ಲಾಹನ ಅಸ್ತಿತ್ವವನ್ನು ಜನರಿಗೆ ಸಾಬೀತುಗೊಳಿಸಿ ತೋರಿಸಿ ಕೊಡಲಿಕ್ಕಾಗಿದೆ. ಏಕೆಂದರೆ ಪ್ರತಿಯೊಂದು ಕೋಮಿನ ಧಾರ್ಮಿಕ ವಿಶ್ವಾಸದ ಸ್ಥಿತಿ ಬಹಳ ಬಲಹೀನವಾಗಿದೆ. ಪರಲೋಕವನ್ನು ಕೇವಲ ಒಂದು ಕಥೆಯಾಗಿ ಭಾವಿಸಲಾಗುತ್ತದೆ. ಲೋಕದ ಬಗ್ಗೆ ಮತ್ತು ಲೋಕದ ಪದವಿಗಳ ಬಗ್ಗೆ ಇರುವ ದೃಢ ವಿಶ್ವಾಸ, ಲೋಕದ ಸಾಮಗ್ರಿಗಳ ಬಗ್ಗೆ ಇರುವ ದೃಢ ವಿಶ್ವಾಸ ಖಂಡಿತವಾಗಿಯೂ ಸರ್ವಶಕ್ತನಾದ ಅಲ್ಲಾಹನ ಬಗ್ಗೆಯಾಗಲಿ, ಪರಲೋಕದ ಬಗ್ಗೆಯಾಗಲಿ ಇರುವುದಿಲ್ಲ ಎಂದು ಪ್ರತಿಯೊಬ್ಬ ಮನುಷ್ಯನೂ ತನ್ನ ಕರ್ಮಗಳ ಮೂಲಕ ತೋರಿಸಿಕೊಡುತ್ತಿದ್ದಾನೆ. ನಾಲಗೆಯಿಂದ ಬೇರೆಯೇ ಹೇಳುತ್ತಾನೆ. ಆದರೆ ಹೃದಯದಲ್ಲಿ ಲೌಕಿಕ ಪ್ರೇಮ ಪ್ರಥಮ ಸ್ಥಾನದಲ್ಲಿರುತ್ತದೆ. ಯಹೂದಿಯರಲ್ಲಿ ದೇವ ಪ್ರೇಮ ತಣ್ಣಗಾದಾಗ ಮಸೀಹ್ ಆಗಮಿಸಿದ್ದರು. ಈಗ ನನ್ನ ಕಾಲದಲ್ಲಿ ಇದೇ ಸ್ಥಿತಿ ಇದೆ. ಆದುದರಿಂದ ನಾನು ಕಳುಹಿಸಲ್ಪಟ್ಟೆನು. ವಿಶ್ವಾಸದ ಕಾಲ ಪುನಃ ಬರಲಿಕ್ಕೋಸ್ಕರ ಮತ್ತು ಹೃದಯಗಳಲ್ಲಿ ತಖ್ವ ಹುಟ್ಟುವಂತೆ ಮಾಡಲಿಕ್ಕೋಸ್ಕರ.

ಒಟ್ಟಿನಲ್ಲಿ, ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿದ ಹೊಣೆಗಾರಿಕೆಗಳನ್ನು ಈಡೇರಿಸುತ್ತಾ ಅಲ್ಲಾಹನ ಬಗ್ಗೆ ಪ್ರೇಮದಲ್ಲಿ ವರ್ಧನೆಯನ್ನು ಹೊಂದುವುದು, ಏಕದೇವ ವಿಶ್ವಾಸವನ್ನು ಹೃದಯದಲ್ಲಿ ತುಂಬಿಸುವುದು, ಅಲ್ಲಾಹನ ಮತ್ತು ಅವನ ರಸೂಲ್ ಸಲ್ಲಲ್ಲಾಹು ಅಲೈಹಿ ವಸಲ್ಲಮರನ್ನು ಪ್ರೀತಿಸುತ್ತಾ ಅದರೆದುರಿಗೆ ಲೋಕದ ಸುಖ ಸಂತೋಷಗಳನ್ನು ಹಿಂದಕ್ಕೆ ತಳ್ಳಬೇಕಾದುದು ನಮ್ಮ ಇಂದಿನ ಕೆಲಸವಾಗಿದೆ. ನಾವು ನಮ್ಮೊಳಗೆ ಪರಿಶುದ್ಧ ಬದಲಾವಣೆಯನ್ನು ತರುವ ಜೊತೆಗೆ ಇಲ್ಲಿನ ಸಮಾಜವನ್ನು ಅಲ್ಲಾಹನಿಗೆ ಸಮೀಪವಾಗುವಂತೆ ಮಾಡಲು ಪ್ರಯತ್ನಿಸಬೇಕು. ಇಂದಿನ ಕಾಲದಲ್ಲಿ ಲೋಕ ದೇವನ ಅಸ್ತಿತ್ವವನ್ನು ನಿರಾಕರಿಸುತ್ತಿದೆ. ಪ್ರತಿವರ್ಷ ದೊಡ್ಡ ಸಂಖ್ಯೆಯಲ್ಲಿ ಜನರು ದೇವಾಸ್ತಿತ್ವವನ್ನು ನಿರಾಕರಿಸುವವರಾಗಿ ಪರಿವರ್ತಿತರಾಗುತ್ತಿದ್ದಾರೆ.

ಈ ಜನರು ದೇವಾಸ್ತಿತ್ವವನ್ನು ನಿರಾಕರಿಸುತ್ತಿರುವಾಗ ನಾವು ದೇವನ ಬಗ್ಗೆ ಪ್ರೀತಿಯನ್ನು ನಮ್ಮ ಹೃದಯಗಳಲ್ಲಿ ಸೃಷ್ಟಿಸಿ ಲೋಕಕ್ಕೆ ದೇವನ ಅಸ್ತಿತ್ವದ ವಾಸ್ತವಿಕತೆಯನ್ನು ತಿಳಿಸಿಕೊಡಬೇಕು. ಹಾಗೆ ಮಾಡಿದರೆ ಮಾತ್ರ ನಾವು ಈ ಜಲ್ಸದ ಉದ್ದೇಶಲಕ್ಷ್ಯವನ್ನು ಈಡೇರಿಸುವವರಾಗುವೆವು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಬೈಅತ್ ಮಾಡಿದ ಹೊಣೆಗಾರಿಕೆ ನಿಭಾಯಿಸುವವರಾಗುವೆವು. ನಾವು ನಮ್ಮ ಮಕ್ಕಳ ಮತ್ತು ಮುಂದಿನ ಪೀಳಿಗೆಗಳ ಹೃದಯಗಳಲ್ಲಿ ಸಹ ಅಲ್ಲಾಹನ ಬಗ್ಗೆ ಪ್ರೀತಿ ಮತ್ತು ಅವನ ರಸೂಲರ ಪ್ರೀತಿಯನ್ನು ಸೃಷ್ಟಿಸಲು ಧಾರಾಳವಾಗಿ ಪ್ರಯತ್ನಿಸುತ್ತಾ ಇರಬೇಕು. ಆದರೆ ನೆನಪಿಡಿರಿ, ಅಲ್ಲಾಹನ ಅನುಗ್ರಹದ ಸಹಾಯವಿಲ್ಲದೆ ಇದು ಸಾಧ್ಯವಾಗಲಾರದು. ಆದುದರಿಂದ ಅಲ್ಲಾಹನ ಅನುಗ್ರಹ ಗಳಿಸಲು ಸಹ ಬಹಳ ಪ್ರಾರ್ಥನೆಗಳನ್ನು ಮಾಡುವ ಆವಶ್ಯಕತೆ ಇದೆ. ಅದರ ಬಗ್ಗೆ ಬಹಳ ಶ್ರದ್ಧೆ ನೀಡಬೇಕು. ಅಲ್ಲಾಹನು ನಮಗೆ ಹಾಗೆ ಮಾಡುವ ಭಾಗ್ಯ ದಯಪಾಲಿಸುವವನಾಗಲಿ – ಆಮೀನ್.

——————————*****——————————

اَلْحَمْدُ لِلّٰہِ نَحمَدُہٗ وَ نَسْتَعِیْنُہٗ وَ نَسْتَغْفِرُہٗ وَنُؤمِنُ بِہٖ وَنَتَوَکَّلُ

عَلَیْہِ وَنَعُوْذُ بِاللّٰہِ مِنْ شُرُوْرِ اَنْفُسِنَا وَ مِنْ سَیِّئَاتِ اَعْمَالِنَا مَنْ

یَّھْدِہِ اللّٰہُ فَلَا مُضِلَّ لَہٗ وَمَنْ یُّضْلِلْہُ فَلَا ھَادِیَ لَہٗ - وَنَشْھَدُ اَنْ لَّا

اِلٰہَ اِلَّا اللّٰہُ وَنَشْھَدُ اَنَّ مُحَمَّدًا عَبْدُہٗ وَرَسُوْلُہٗ- عِبَادَاللّٰہِ رَحِمَکُمُ

اللّٰہُ اِنَّ اللّٰہَ یَاْمُرُ بِالْعَدْلِ وَ الْاِحْسَانِ وَ اِیْتَاءِذِی الْقُرْبٰی وَ یَنْھٰی

عَنِ الْفَحْشَاءِ وَ الْمُنْکَرِ وَ الْبَغْیِ یَعِظُکُمْ لَعَلَّکُمْ تَذَکَّرُوْنَ

اُذْکُرُوْا اللّٰہَ یَذْکُرْکُمْ وَ ادْعُوْہُ یَسْتَجِبْ لَکُمْ وَلَذِکْرُ اللّٰہِ اَکْبَرُ-


***Friday Sermon delivered by Hadrath Khaleefatul Masih Al Khamis*** *(atba)*

*At Jalsa Gah, Nunspeet, Netherland. On 27-09-2019*

**Summarized by** *Majlis Ansarullah Bharat*

***Kannada Translation**:* M. Ubeidullah for Kannada Desk, Qadian

***Reviewed by**:* M.P Ibrahim |***Typing**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian



***Email**: khutuba.kannada@gmail.com*



**You can find all the Sermons archived at**: www.alislam.org/friday-sermon